# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
website: https://kptcl.karnataka.gov.in
ಇ-ಮೇಲ್‌ವಿಳಾಸ: director.ahr.kptcl@gmail.com

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ ವಿಳಾಸ : ನಿಗಮ ಕಾರ್ಯಾಲಯ, ಕಾವೇರಿಭವನ, ಕೆ.ಜಿ.ರಸ್ತೆ, ಬೆಂಗಳೂರು-560 009

ಓದಲಾಗಿದೆ:

ನಿಗಮದ ಅನುಮೋದಿತ ಟಿಪ್ಪಣಿ ದಿನಾಂಕ: 24.08.2022.

ಪೀಠಿಕೆ:

ಕವಿಪ್ರನಿನಿ ಸಂಸ್ಥೆಯು ತಾಂತ್ರಿಕ ಆಧಾರಿತ ಸಂಸ್ಥೆಯಾಗಿದ್ದು, ನಿಗಮ ಕಾರ್ಯಾಲಯವು ಒಳಗೊಂಡಂತೆ ರಾಜ್ಯ ವ್ಯಾಪ್ತಿಯಲ್ಲಿ ಅಧೀನ ಕಛೇರಿಗಳನ್ನು ಹೊಂದಿದ್ದು, ಆಡಳಿತಾತ್ಮಕ, ತಾಂತ್ರಿಕ ಹಾಗೂ ಲೆಕ್ಕ ಪತ್ರ/ಸಿಬ್ಬಂದಿ ಶಾಖೆಗಳಲ್ಲಿನ ತುರ್ತು ಕಾರ್ಯ ನಿರ್ವಹಣೆಗಾಗಿ ನಿರ್ದಿಷ್ಟ ಕೆಲಸಕ್ಕೆ ಹಾಗೂ ನಿರ್ದಿಷ್ಟ ಅವಧಿಗೆ ಹೊರಗಿನ ಏಜೆನ್ಸಿ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸಲು ಡಾಟಾ ಎಂಟ್ರಿ ಆಪರೇಟರ್‌ಗಳು, ಕಛೇರಿ ಪರಿಚಾರಕ, ಸ್ವಾಗತಕಾರಿಣಿ, ವಾಹನ ಚಾಲಕರು ಹಾಗೂ ಭದ್ರತಾ ಸಿಬ್ಬಂದಿಗಳ ಸೇವೆಗಳನ್ನು ಪಡೆಯಲಾಗಿದ್ದು, ಸದರಿ ಕೆಲಸಗಾರರ ಸಮಯ ನಿಷ್ಠೆ ಹಾಗೂ ಕರ್ತವ್ಯ ದಕ್ಷತೆಯನ್ನು ಉತ್ತೇಜಿಸುವ ದೃಷ್ಟಿಯಿಂದ ದಿನಾಂಕ: 31.08.2022 ರಂದು ಆಚರಿಸಲ್ಪಡುವ ಗೌರಿ-ಗಣೇಶ ಹಬ್ಬದ ಪ್ರಯುಕ್ತ 'ಪ್ರೋತ್ಸಾಹಧನ'ವನ್ನು (Incentive) ಪಾವತಿಸಲು ನಿರ್ಧರಿಸಿರುವುದರಿಂದ ಈ ಕೆಳಕಂಡಂತೆ ಆದೇಶಿಸಲಾಗಿದೆ:-

ಆದೇಶ ಸಂಖ್ಯೆ: ಕವಿಪ್ರನಿನಿ/ಔಬಾ/ಬಿ14/4957/2008-09

ಬೆಂಗಳೂರು ದಿನಾಂಕ: 29 AUG 2022

ದಿನಾಂಕ: 31.08.2022 ರಂದು ಆಚರಿಸಲ್ಪಡುವ ಗೌರಿ-ಗಣೇಶ ಹಬ್ಬದ ಪ್ರಯುಕ್ತ "ಪ್ರೋತ್ಸಾಹಧನ"ವಾಗಿ (Incentive) ರೂ.1,000/- (ರೂ ಒಂದು ಸಾವಿರ ಮಾತ್ರ) ಕ.ವಿ.ಪ್ರ.ನಿ.ನಿ. ನಿಗಮ ಕಾರ್ಯಾಲಯ, ವಲಯ ಕಛೇರಿಗಳು ಹಾಗೂ ಇತರೆ ಅಧೀನ ಕಛೇರಿಗಳಲ್ಲಿ ಹೊರ ಗುತ್ತಿಗೆ ಆಧಾರದ ಮೇಲೆ, ಈ ಆದೇಶದ ದಿನಾಂಕಕ್ಕೆ ಕನಿಷ್ಠ ಒಂದು ವರ್ಷ ಸೇವೆ ಪೂರೈಸಿರುವ ಈ ಕೆಳಕಂಡ ಸೇವೆಗಳನ್ನು ಒದಗಿಸಿರುವ ಏಜೆನ್ಸಿಯವರು ಮುಂಗಡವಾಗಿ ಕೂಡಲೇ ಪಾವತಿಸಿ, ಪಾವತಿಸಿರುವ ಬಗ್ಗೆ ಪೂರಕ ದಾಖಲಾತಿಗಳನ್ನು ಸಂಬಂಧಿಸಿದ ವೇತನ ಬಟವಾಡೆ ಅಧಿಕಾರಿಗಳಿಗೆ ಪಾವತಿಸಿರುವ ಮೊತ್ತ ಮತ್ತು ಅನ್ವಯವಾಗುವ ಜಿ.ಎಸ್.ಟಿ ಸಹಿತ ಮರು ಪಾವತಿ ಪಡೆಯುವಂತೆ ಆದೇಶಿಸಲಾಗಿದೆ:-

ಸೇವಾ ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ ಸಂ | ಹೊರ ಗುತ್ತಿಗೆ ಸೇವೆಗಳು | ಅನ್ವಯವಾಗುವ ಕಛೇರಿಗಳು |
|---|---|---|
| 1 | ಡಾಟಾ ಎಂಟ್ರಿ ಆಪರೇಟರ್‌ಗಳು, | ಎಲ್ಲಾ ಕಛೇರಿಗಳು |
| 2 | ಕಛೇರಿ ಪರಿಚಾರಕರು, | ಎಲ್ಲಾ ಕಛೇರಿಗಳು |
| 3 | ಸ್ವಾಗತಕಾರಿಣಿ, | ನಿಗಮ ಕಾರ್ಯಾಲಯ |
| 4 | ವಾಹನ ಚಾಲಕರು | ನಿಗಮ ಕಾರ್ಯಾಲಯ |
| 5 | ಭದ್ರತಾ ಸಿಬ್ಬಂದಿಗಳು | ನಿಗಮ ಕಾರ್ಯಾಲಯ |

ಮುಂದುವರೆದು, ಸಂಬಂಧಪಟ್ಟ ಹೊರಗುತ್ತಿಗೆ ಕೆಲಸಗಾರರಿಗೆ ಪ್ರೋತ್ಸಾಹ ಧನವನ್ನು ಮುಂಗಡವಾಗಿ ಪಾವತಿಸಿರುವ ಬಗ್ಗೆ ಧೃಡೀಕರಿಸಿ ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದ ನಂತರ, ಸದರಿ ಏಜೆನ್ಸಿಯವರ ಬಿಲ್ಲುಗಳನ್ನು ಅನುಮೋದಿಸುವಂತೆ ಬಟವಾಡೆ ಅಧಿಕಾರಿಗಳಿಗೆ ಸೂಚಿಸಿದೆ.

| |
|---|
| ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕವಿಪ್ರನಿನಿ ರವರಿಂದ ಅನುಮೋದಿಸಲ್ಪಟ್ಟಿದೆ. |

ನಿರ್ದೇಶಕರು (ಆ ಮತ್ತು ಮಾಸಂ)
ಕವಿಪ್ರನಿನಿ.

-2-

**ಪ್ರತಿಗಳು :**

1. ನಿರ್ದೇಶಕರು (ಆಡಳಿತ), ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ, 2ನೇ ಮಹಡಿ, ಟಿ.ಟಿ.ಎಂ.ಸಿ 'ಎ' ಬ್ಲಾಕ್, ಬಿ.ಎಂ.ಟಿ.ಸಿ, ಕಾಂಪ್ಲೆಕ್ಸ್, ಶಾಂತಿನಗರ, ಕೆ.ಹೆಚ್.ರೋಡ್, ಬೆಂಗಳೂರು-27 ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಮೆ/ಸರ್ವೋದಯ ಮ್ಯಾನ್ ಪವರ್ ಅಂಡ್ ಸೆಕ್ಯುರಿಟಿ ಸೆಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್, ನಂ 1072, 14 ನೇ ಮುಖ್ಯರಸ್ತೆ, 7 ನೇ ಕ್ರಾಸ್, ಬಿ.ಟಿ.ಎಂ ಲೇಔಟ್, 1ನೇ ಹಂತ, ಬೆಂಗಳೂರು-560029 ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ವಿಸ್ಡಂ ಸೆಕ್ಯುರಿಟಿ ಸರ್ವೀಸಸ್, ನಂ106, 1ನೇ ಮಹಡಿ, 40 ಅಡಿ ರಸ್ತೆ, ಮಂಜುನಾಥ ನಗರ,ವೆಸ್ಟ್ ಆಫ್ ಕಾರ್ಡ್ ರಸ್ತೆ, ಬೆಂಗಳೂರು 5600 10

3. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ.

4. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.

3. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಪ್ರಸರಣ)/ನಿರ್ದೇಶಕರು (ಹಣಕಾಸು)/ನಿರ್ದೇಶಕರು (ಆ ಮತ್ತು ಮಾ.ಸಂ), ಕವಿಪ್ರನಿನಿ ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು.

**ಪ್ರತಿಯನ್ನು ಈ ಕೆಳಕಂಡವರ ಅಗತ್ಯ ಕ್ರಮಕ್ಕಾಗಿ** www.kptcl.karnataka.gov <http://www.kptcl.karnataka.gov>.in **ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.**

4. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)/ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
5. ಕಂಪನಿ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿಭವನ.
6. ಎಲ್ಲಾ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ)/ಉಪ ಲೆಕ್ಕ ನಿಯಂತ್ರಣಾಧಿಕಾರಿ, ಕವಿಪ್ರನಿನಿ.
7. ಲೆಕ್ಕಾಧಿಕಾರಿ (ಆಂ.ಪ.)/(ಆಂ.ನಿ)/(ನಗದು ಮತ್ತು ಲೆಕ್ಕಗಳು) ಕವಿಪ್ರನಿನಿ. ಕಾವೇರಿಭವನ, ಬೆಂಗಳೂರು.
8. ಎಲ್ಲಾ ಲೆಕ್ಕಾಧಿಕಾರಿಗಳು, ಕವಿಪ್ರನಿನಿ.
9. ಕ್ರೋಢೀಕರಣ ಘಟಕ, ಕವಿಪ್ರನಿನಿ, ಕಾವೇರಿಭವನ, ಬೆಂಗಳೂರು.